# ಉಡುಪಿನಲ್ಲಿ ಬೆಳಕಿನ ಬೆಡಗು!

ಫ್ಯಾಷನ್ ಉಡುಗೆಗೆ ಹೊಸ ಸೇರ್ಪಡೆ ಎಲ್ಇಡಿ ಬಲ್ಬ್ ಜೋಡಣೆ. ಇದರಿಂದ ಉಡುಪು ಮಿರ ಮಿರನೆ ಮಿಂಚುತ್ತದೆ. ಮಕ್ಕಳಿಗೆ ಇದನ್ನು ತೊಟ್ಟುಕೊಳ್ಳುವುದೇ ಪುಳಕ ಕೊಡುವ ಸಂಗತಿ.

★ ಆಶಾ ಕುಲಕರ್ಣಿ



ಕಾಲ ಬದಲಾದಂತೆ ಫ್ಯಾಷನ್ ಕೂಡ ಬದಲಾಗುತ್ತಿದೆ. ಆಧುನಿಕ ಜಗತ್ತಿಗೆ ಹೊಂದುವಂತೆ ಫ್ಯಾಷನ್ ಲೋಕವೂ ತನ್ನನ್ನು ಬದಲಾವಣೆಗೆ ಒಗ್ಗಿಸಿಕೊಳ್ಳುತ್ತಿದೆ. ಪ್ರತಿಯೊಬ್ಬರೂ ಹೊಸ ಫ್ಯಾಷನ್ ಮೂಲಕ ತಮ್ಮನ್ನು ತಾವು ಸುಂದರವಾಗಿಸಿಕೊಳ್ಳಲು ಬಯಸುವವರೇ ಹೆಚ್ಚು. ಇದರ ಪರಿಣಾಮ ಎಲ್ಲಿ ನೋಡಿದರೂ ಶಾಪಿಂಗ್, ಡಿಸ್ಕೌಂಟ್ ಸೇಲ್, ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಸುಂದರವಾದ ದೀಪಗಳಿಂದ ಅಲಂಕರಿಸಿ ಹೊಸ ವರ್ಷವನ್ನು ಬರಮಾಡಿಕೊಳ್ಳುವ ಸಂಭ್ರಮ ಹಾಗೂ ಗ್ರಾಹಕರನ್ನು ತಮ್ಮತ್ತ ಸೆಳೆಯುವ ತವಕ.



ಈ ಸಂದರ್ಭದಲ್ಲಿ ಫ್ಯಾಷನ್ ಲೋಕದಲ್ಲಿ ಇದೀಗ ಎಲೆಕ್ಟ್ರಾನಿಕ್ ಯುಗ ಆರಂಭವಾಗಿದೆ. ಅದುವೇ ಎಲ್.ಇ.ಡಿ ಬಲ್ಬ್ ಉಡುಪುಗಳು. ಇದೀಗ ಎಲ್ಲಿ ನೋಡಿದರೂ ಮಿರ ಮಿರನೇ ಮಿಂಚುವ ಎಲ್.ಇ.ಡಿ ಬಲ್ಬ್‌ಗಳ ಉಡುಪುಗಳು ಟ್ರೆಂಡಿಯಾಗಿವೆ. ಲೈಟ್ ಕಲರ್‌ನ ನೆಟ್ ಬಟ್ಟೆಗಳಿಂದ ತಯಾರಿಸಿದ ಲಾಂಗ್ ಸ್ಕರ್ಟ್, ಒನ್ ಪೀಸ್ ಉಡುಪುಗಳ ಮೇಲೆ ಹರಳು, ಚಮಕಿಗಳ ಜೊತೆಗೆ ಎಲ್.ಇ.ಡಿ ಬಲ್ಬ್‌ಗಳನ್ನು ಅಳವಡಿಸಿ ಸುಂದರವಾಗಿ ಉಡುಪುಗಳನ್ನು ಹೊಲಿಸಿಕೊಂಡು ಧರಿಸುವುದೇ ಈಗಿನ ಟ್ರೆಂಡ್.

ಇದರ ಜೊತೆಗೆ ಕಂದು, ಬಿಳಿ ಮತ್ತಿತರ ಫರ್ ಕೋಟ್‌ಗಳ ಮೇಲೆ ಎಲ್.ಇ.ಡಿ ಬಲ್ಬ್ ವಿನ್ಯಾಸ ಇನ್ನಷ್ಟು ಟ್ರೆಂಡಿ ಲುಕ್ ನೀಡುತ್ತಿದೆ. ಇವಿಷ್ಟೇ ಅಲ್ಲದೆ ಚಿಕ್ಕ ಚಿಕ್ಕ ಮಿಡಿ, ತ್ರಿಫೋರ್ತ್ ಜಿನ್ಸ್, ಜಾಕೆಟ್ ಹೀಗೆ ಸಾಕಷ್ಟು ಉಡುಪುಗಳ ಮೇಲೆ ಎಲ್.ಇ.ಡಿ ಬಲ್ಬ್‌ಗಳ ವಿನ್ಯಾಸವನ್ನು ಅಳವಡಿಸಿದ ಉಡುಪುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಟ್ರೆಡಿಷನಲ್ ಉಡುಪು ಧರಿಸುವವರಿಗೆ ಎಲ್.ಇ.ಡಿ ಬಲ್ಬ್ ಅಳವಡಿಸಿದ ಸೀರೆ ಬ್ಲೌಸ್‌ಗಳು, ಲೆಹಂಗಾ ಚೋಲಿ, ಗಾಗ್ರಾ ಕೂಡ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿವೆ.

ಬರೀ ಉಡುಪುಗಳ ಮೇಲೆ ಮಾತ್ರವಲ್ಲದೇ ಇದೀಗ ಮಹಿಳೆಯರು ಧರಿಸುವ ಓಲೆಗಳನ್ನು ಆಕರ್ಷಕ ಬಣ್ಣಗಳಿಂದ ಕೂಡಿದ ಲೈಟ್ ಬಲ್ಬ್‌ಗಳನ್ನು ಬಳಸಿ ಸುಂದರವಾದ ಓಲೆ ತಯಾರಿಸುವ ಮೂಲಕ ಫ್ಯಾಷನ್ ಲೋಕಕ್ಕೆ ಒಂದು ಹೊಸ ಅರ್ಥ ಬರುವಂತೆ ಮಾಡಿದ್ದಾರೆ ಇಂದಿನ ಫ್ಯಾಷನ್ ಮಾಂತ್ರಿಕರು. ಇವುಗಳನ್ನು ಶಾಪಿಂಗ್, ಔಟಿಂಗ್‌ಗಳಲ್ಲಿ ಧರಿಸಿದರೆ ಆಕರ್ಷಕವಾದ ವ್ಯಕ್ತಿತ್ವ ನಿಮ್ಮದಾಗುತ್ತದೆ.

ಫ್ಯಾಷನ್ ಲೋಕಕ್ಕೆ ಇನ್ನೊಂದು ಗರಿ ಸೇರಿಕೊಂಡಿದೆ ಅದುವೇ ಎಲ್.ಇ.ಡಿ ಐ ಲೈನರ್‌ಗಳು. ಎಫ್ ಲ್ಯಾಷಸ್ ಎಂಬ ಹೊಸ ಎಲ್.ಇ.ಡಿ ಐ ಲೈನರ್ ಮಾರುಕಟ್ಟೆಗೆ ಬಂದಿದೆ. ಇದು ವಾಟರ್‌ಪ್ರೂಫ್ ಇರುವುದರಿಂದ ನೀರಿನಲ್ಲಿ ನೆನೆದರೂ ಹಾಳಾಗದಂತೆ ಈ ಐ ಲೈನರ್ ತಯಾರಿಸಲಾಗಿದೆ. ಇದರಿಂದ ಕಣ್ಣಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ■